**CC 1143/2017**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ಹೊಸಪೇಟೆ.**
**ಸಿಸಿ ನಂಬರ್** 1143/2017

**ಸಿ ಡಬ್ಲೂ** 22
**ಪಿ ಡಬ್ಲೂಃ** 9

**ಸಾಕ್ಷಿಯ ಹೆಸರು - ಬಿ. ಪಣೀಂದ್ರ ಗೌಡ**
**ತಂದೆಯ ಹೆಸರು - ಲೇಟ್ ಬಿ. ವೀರನಗೌಡ**
**ವಯಸ್ಸು -** 69 **ವರ್ಷಗಳು**
**ಉದ್ಯೋಗ - ನಿವೃತ್ತ ಆರಕ್ಷಕ ಉಪ ನಿರೀಕ್ಷಕ**
**ವಾಸಸ್ಥಳ - ಬೈಲುವದ್ದಿಗೇರಿಗ್ರಾಮ, ಹಾಲಿಃ ಬೆಂಗಳೂರು**

**ಸಾಕ್ಷಿಯನ್ನು ದಿನಾಂಕಃ** 29-08-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು ಜೂನ್ **-2016** ರಿಂದ **20-03-2017** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **30-01-2017** ರಂದು ಸಂಜೆ **06.30** ಗಂಟೆಗೆ ನಾನು ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದಾಗ ಚಾಸಾ **-1** ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ನಂ. **23/2017** ರಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತೇನೆ.

ಸಾಕ್ಷಿ ದೂರು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ **1** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **1(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **28** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **28 (ಎ)** ಎಂದು ಗುರುತಿಸಲಾಯಿತು.

ಮರುದಿನ ಅಂದರೆ ದಿಃ 31-01-2017 ರಂದು ಕೃತ್ಯ ಸ್ಥಳ ಪಂಚನಾಮೆಯನ್ನು ಮಾಡಲು ಪಂಚರಾದ ಚಾಸಾ -2 ಮತ್ತು 3 ರವರನ್ನು ಠಾಣೆಗೆ ಕರೆಯಿಸಿಕೊಂಡು ನಂತರ ಸ್ಥಳಕ್ಕೆ ಹೋಗಿರುತ್ತೇನೆ. ಚಾಸಾ -1 ರವರು ತೋರಿಸಿದ ಕೃತ್ಯ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ 2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿಃ 2 (ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿಃ 3 ರಿಂದ 6 ರ ಫೋಟೋ ನೋಡಿ ಗುರುತಿಸಿರುತ್ತಾರೆ.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 29 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 29 (ಎ) ಎಂದು ಗುರುತಿಸಲಾಯಿತು.

ಸಾಕ್ಷಿದಾರರಾದ ಚಾಸಾ -12, 15, 16, 17 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ -30 ರವರು ವಹಿಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಜಿ ಪಿ ಆರ್., ವಕೀಲರಿಂದ**

ನಾನು ಪ್ರಥಮ ವರ್ತಮಾನ ವರದಿಯನ್ನು ಓದಿ ಪರಿಶೀಲಿಸಿರುತ್ತೇನೆ ಅಂದರೆ ಸರಿ. ಚಾಸಾ -1 ರವರು ದೂರಿನಲ್ಲಿ ಅಸಲು ದಾವೆ ಸಂಖ್ಯೆಃ 338/2016 ರ ಉಲ್ಲೇಖ ಮಾಡಿರುತ್ತಾರೆ ಅಂದರೆ ಸರಿ.

**CC 1143/2017**

**ಸಿ ಡಬ್ಲೂ 22**

**ಪಿ ಡಬ್ಲೂ: 9**

ಸದರಿ ದಾವೆಯ ಆದೇಶ ಪುಟ ಅಥವಾ ಇನ್ಯಾವುದೇ ದಾಖಲೆಗಳನ್ನು ದೂರಿನೊಂದಿಗೆ ಕೊಟ್ಟಿದ್ದರೋ ಇಲ್ಲವೋ ನನಗೆ ನೆನಪಿಲ್ಲ. ಸದರಿ ದಾವೆ ಯಾರು ಸಲ್ಲಿಸಿದ್ದರು ಮತ್ತು ಆ ದಾವೆಯಲ್ಲಿ ಏನೆಲ್ಲಾ ಆದೇಶಗಳು ಆಗಿವೆ ಎಂದು ನನ್ನ ತನಿಖೆಯಲ್ಲಿ ತಿಳಿದುಕೊಂಡಿರುವುದಿಲ್ಲ. ದೂರಿನಲ್ಲಿ ಚಾಸಾ -1 ರವರು ಈ ಹಿಂದೆ ಅವರೇ ಮೌಖಿಕವಾಗಿ ನಮ್ಮ ಠಾಣೆಯಲ್ಲಿ ಕಂಪ್ಲೆಂಟ್ ಕೊಟ್ಟಿರುವುದಾಗಿ ನಮೂದಿಸಿರುತ್ತಾರೆ ಅಂದರೆ ಸರಿ.  ಸದರಿಯವರು ಯಾರಿಗೆ ಆ ರೀತಿ ಮೌಖಿಕ ದೂರನ್ನು ನೀಡಿದ್ದರು ಎಂದು ನಾನು ತನಿಖೆಯಲ್ಲಿ ತಿಳಿದುಕೊಂಡಿಲ್ಲ. ದೂರನ್ನು ಸುಮಾರು 15 ದಿನಗಳ ತಡವಾಗಿ ನೀಡಿದ್ದಕ್ಕೆ ಕಾರಣ ಏನು ಎಂದು ನಾನು ತನಿಖೆ ಮಾಡಿರುವುದಿಲ್ಲ.

ಈ ಪ್ರಕರಣ ದಾಖಲಾಗುವುದಕ್ಕೂ ಮೊದಲು ನಮ್ಮ ಠಾಣೆಯಲ್ಲಿ ನೇರ ಅರ್ಜಿ(ಡಿ.ಪಿ.) ಪ್ರಕರಣವನ್ನು ಇದೇ ವಿಷಯಕ್ಕೆ ಸಂಬಂಧಿಸಿ ದಾಖಲಿಸಲಾಗಿತ್ತು ಅಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯ ಬಗ್ಗೆ ನಾನು ಯಾವುದೇ ತನಿಖೆ ಮಾಡಿಲ್ಲ ಅಂದರೆ ಸರಿ. ದೂರಿನಲ್ಲಿ ರೂ. 45 ಲಕ್ಷಗಳಷ್ಟು ಬೆಲೆ ಬಾಳುವ ಸಾಮಾನುಗಳು ಕಳ್ಳತನ ಆಗಿವೆ ಎಂದು ನಮೂದಿಸಲಾಗಿದೆ ಅಂದರೆ ಸರಿ. ಆ ಸಾಮಾನುಗಳ  ವಿವರಣೆಯನ್ನು ನಾನು ಚಾಸಾ -1 ರವರಿಂದ ಕಲೆ ಹಾಕಿಲ್ಲ.

ಕೃತ್ಯ ಸ್ಥಳಕ್ಕೆ ಹೋಗಿದ್ದೆ ಎನ್ನಲಾದ ದಿನದಂದು ಸ್ಥಳದಿಂದ ಯಾವುದೇ ಮುರಿದ ಬೀಗವನ್ನು ನಾನು ಜಪ್ತು ಪಡಿಸಿಕೊಂಡಿಲ್ಲ. ನಾನು ದೂರಿನ ಅಂಶಗಳನ್ನು ಸರಿಯಾಗಿ ಪರಿಶೀಲಿಸದೇ, ಅದರ ಸತ್ಯಾ ಸತ್ಯತೆ ತಿಳಿಯದೇ ಮೇಲಾಧಿಕಾರಿಗಳ ಒತ್ತಡಕ್ಕೆ ಮಣಿದು ಪ್ರಥಮ ವರ್ತಮಾನ ವರದಿ ತಯಾರಿಸಿರುತ್ತೇನೆ ಅಂದರೆ ಸರಿಯಲ್ಲ.

**CC 1143/2017**

ನಿಪಿಃ 2 ರ ಪಂಚನಾಮೆ ಮತ್ತು ನಿಪಿಃ 29 ರ ಕಚ್ಚಾ ನಕಾಶೆಯನ್ನು ಠಾಣೆಯಲ್ಲಿ ಕುಳಿತು ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ಫೋಟೋಗಳನ್ನು ಸಹ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ಚಾಸಾ -12, 15 ರಿಂದ 17 ರವರ ಹೇಳಿಕೆಗಳನ್ನು ಪಡೆದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಪಂಚನಾಮೆ ಮಾಡಿಲ್ಲ ಮತ್ತು ಹೇಳಿಕೆಗಳನ್ನು ಪಡೆದಿಲ್ಲ ಅಂದರೆ ಸರಿಯಲ್ಲ. ಸುಳ್ಳು ಪ್ರಕರಣ ದಾಖಲಿಸಿಕೊಂಡು ಅದಕ್ಕನುಗುಣವಾಗಿ ಪಂಚನಾಮೆ ಮತ್ತು ಹೇಳಿಕೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ**.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.